ಪಕ್ಷದಲ್ಲಿ then Ihave to take him out of it and change him. ಅದೇ ರೀತಿ ಇನ್ನು ಯಾವುದಾದರೂ ಇದ್ದರೆ ಹೇಳಿ. ಅನೇಕ ವೇಳೆ ಈ ರೀತಿ ಆಗುತ್ತದೆ. ನಾವು ಅದೆಲ್ಲಾ ಸರಿಯಾಗಿದೆ ಎಂದು ಹೇಳುವುದಿಲ್ಲ. ಬಾಪ್ಪೂಗೌಡರು ಹೇಳಿದ ಹಾಗೆ ಈ ರೀತಿಯಾಗಿ ಕೆಲವು ದಿವಸದ ಹಿಂದೆ ಆಗಿರ ಬಹುದು, ಅದನ್ನು ರಿಯರು ನೋಡುವುದೇ ಇಲ್ಲ. ಇವೆಲ್ಲಾ ಕಾರಣಗಳು ಇವೆ. If that is so I will change him.

ಶ್ರೀ ಎಂ.ಎಸ್. ಕೃಷ್ಣನ್.—ಸ್ವಾಮಿ, ಈ ಲಿಸ್ಟ್‌ನಲ್ಲಿ ನೋಡಿದರೆ ಎಲ್ಲಾ ತಾಲ್ಲೂಕುಗಳಲ್ಲೂ ಸಹ ಕಾಂಗ್ರೆಸ್ ಸದಸ್ಯರನ್ನೇ, ಕಾಂಗ್ರೆಸ್ ಕಮಿಟಿಯ ಸದಸ್ಯರನ್ನೇ ಸೇರಿಸಿದ್ದೀರಿ. ಈಪ್ಪೊತ್ತಿನ ದಿವಸ ಈ ಕಮಿಟಿ ಇರುವುದು ಮುಖ್ಯ ಎಂದು ಹೇಳುತ್ತೇನೆ. ಈಪ್ಪೊತ್ತಿನ ದಿವಸ ಸರ್ಕಾರ ಈ ೨೦ ಅಂಶ ಕಾರ್ಯ ಕ್ರಮವನ್ನು ಜಾರಿಗೆ ತರಬೇಕು ಎನ್ನುವುದು ಮುಖ್ಯ ಅಂಶವಾಗಿರುವುದರಿಂದ ತಾವು ಈ ಕಮಿಟಿಗಳಲ್ಲಿ ಬರೀ ಕಾಂಗ್ರೆಸ್ ಪಕ್ಷದ ಸದಸ್ಯರನ್ನಲ್ಲದೇ ಬೇರೆ ಯಾವ ಪಕ್ಷಗಳು ಈ ೨೦ ಅಂಶ ಕಾರ್ಯಕ್ರಮವನ್ನು ಜಾರಿಗೆ ತರುವುದಕ್ಕೆ ಒಪ್ಪಿಕೊಳ್ಳುತ್ತಾರೋ ಅಂಥ ಪಕ್ಷದವರನ್ನು ಎಲ್ಲಾ ತಾಲ್ಲೂಕುಗಳಲ್ಲಿರುವ ಈ ಕಮಿಟಿಗಳಿಗೆ ನೇಮಿಸುವುದಕ್ಕೆ ಒಪ್ಪಿಕೊಳ್ಳುತ್ತೀರಾ ?

ಶ್ರೀ ದಿ. ವೇವರಾಜ ಅರಸ್.—ಎಲ್ಲಾ ತಾಲ್ಲೂಕುಗಳಲ್ಲೂ ಅಂಥಾವರನ್ನು ಸೇರಿಸುವುದಕ್ಕೆ ಒಪ್ಪಲೇ ಬೇಕು ಅಂತ ಏನೂ ಇಲ್ಲ. ಎಲ್ಲೆಲ್ಲಿ ಯೋಗ್ಯ ಜನರು ಇದ್ದಾರೋ, ಯೋಗ್ಯ ಜನರು ಇಲ್ಲ ಎಂದು ಹೇಳು ವುದಿಲ್ಲ, ಇದ್ದಾರೆ, ಎಲ್ಲೆಲ್ಲಿ ಅವಶ್ಯಕವಾಗಿ ಸೇರಿಸಿಕೊಳ್ಳಬೇಕಾಗಿದೆಯೋ ಅಂಥಾ ಕಡೆ ಅವರನ್ನು ಸೇರಿಸಿ ಕೊಳ್ಳೋಣ. ಈಗ ಬಾಪ್ಪೂಗೌಡರು ಎಂ.ಎಲ್.ಎ. ಆಗಿದ್ದಾರೆ. ಅವರು ಚೆನ್ನಾಗಿ ಕೆಲಸ ಮಾಡುತ್ತಾರೆ, ಅವರನ್ನು ಎಕ್ಸ್‌ಕ್ಲೂಡ್ ಮಾಡಿದ್ದಾರೆ ಎಂದು ಹೇಳಿದ್ದಾರೆ, ಹಾಗೇನೂ ಇಲ್ಲ. Naturally we give priority to the members of the party who have faith in this programme. In case there are other friends from other parties who are willing to take up this work I do not think there is any bar for getting them into these positions. ಎಲ್ಲಾದರೂ ವೇಕೆನ್ಸಿ ಇವೆಯೇ ಮೊದಲು ನೋಡಿ, ಎಲ್ಲಾದರೂ ಇದ್ದರೆ ತಾವು. ಈಗ ಏನು ಒಂದು ಸಲಹೆ ಮಾಡಿದ್ದೀರಿ ಅದನ್ನು I will certainly consider.

ಚಿಕ್ಕಬಳ್ಳಾಪುರದ ಲೋಕೋಪಯೋಗಿ ವಿಭಾಗದಲ್ಲಿರುವ ರಾಷ್ಟ್ರೀಯ ಹೆದ್ದಾರಿ

೪೫೧ ಶ್ರೀ ಚೌಡರೆಡ್ಡಿ (ಚಿಂತಾಮಣಿ).—ಲೋಕೋಪಯೋಗಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ಚಿಕ್ಕಬಳ್ಳಾಪುರದ ಪಿಡಬ್ಲ್ಯೂಡಿ ಡಿವಿಜನ್‌ನಲ್ಲಿ ಎನ್‌ಎಚ್.ವೇ ಒಟ್ಟು ಎಷ್ಟು ಮೈಲಿ :

(ಆ) ಸದರಿ ಡಿವಿಜನ್‌ನಲ್ಲಿ ಎಷ್ಟು ಸಬ್ ಡಿವಿಜನ್‌ಗಳಿವೆ. ಅವುಗಳಲ್ಲಿ ಎಷ್ಟು ಮೈಲಿ ಟಾರು ರಸ್ತೆ ಇದೆ :

(ಇ) ಈ ರಸ್ತೆಗಳನ್ನು ದುರಸ್ತಿ ಮತ್ತು ಹೊಸದಾಗಿ ಟಾರು ರಸ್ತೆ ಮಾಡಲು ಕಳೆದ ೧೦ ವರ್ಷಗಳಿಂದ ಎಷ್ಟು ಹಣವನ್ನು ಸಬ್ ಡಿವಿಜನ್‌ವಾರು ಹಂಚಲಾಯಿತು :

(ಈ) ಹೀಗೆ ಹಂಚಿರುವ ಹಣವನ್ನು ಪ್ರತಿ ವರ್ಷ ಎಷ್ಟು ಎಷ್ಟು ಟಾರು ರಸ್ತೆಗಳ ದುರಸ್ತಿ ಹಾಗೂ ಹೊಸದಾಗಿ ಟಾರು ರಸ್ತೆ ಮಾಡಲು ಉಪಯೋಗಿಸಲಾಯಿತು :

(ಉ) ಕೋಲಾರದ ಪಿಡಬ್ಲ್ಯೂಡಿ ಡಿವಿಜನ್‌ನಲ್ಲಿ ಎಷ್ಟು ಸಬ್ ಡಿವಿಜನ್‌ಗಳಿವೆ ಮತ್ತು ಎಷ್ಟು ಮೈಲಿ ಟಾರು ಹಾಕಿರುವ ರಸ್ತೆಗಳಿವೆ.

(ಊ) ಕಳೆದ ೧೦ ವರ್ಷಗಳಿಂದ ಸದರಿ ಕೆಲಸಕ್ಕಾಗಿ ಎಷ್ಟು ಹಣ ನಿಗದಿ ಮಾಡಿದ್ದು ಆ ಪೈಕಿ ಎಷ್ಟು ಹಣ ಖರ್ಚು ಮಾಡಿರುತ್ತೆ ?

ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಮಂತ್ರಿಗಳು)—

(ಅ) ಚಿಕ್ಕಬಳ್ಳಾಪುರದ ಲೋಕೋಪಯೋಗಿ ಇಲಾಖೆಯ ವಿಭಾಗವು ರಾಷ್ಟ್ರೀಯ ಹೆದ್ದಾರಿಗಳ ವ್ಯಾಪ್ತಿಗೊಳಪಟ್ಟಿಲ್ಲ.

(ಆ) ಚಿಕ್ಕಬಳ್ಳಾಪುರದ ವಿಭಾಗದಲ್ಲಿ ಐದು ಉಪ-ವಿಭಾಗಗಳಿವೆ, ಹಾಗೂ ೧೮೬-೭೦ ಕಿ ಮೀ. ರಸ್ತೆಗಳಿಗೆ ಟಾರು ಹಾಕಿದೆ.

(ಇ) ಮತ್ತು (ಈ) ರಸ್ತೆಗಳಿಗೆ ಟಾರು ಹಾಕುವುದಕ್ಕಾಗಿ ಪ್ರತ್ಯೇಕವಾಗಿ ಮೊಬಲಗನ್ನು ಗೊತ್ತು ಪಡಿಸಿಲ್ಲ ಆದರೆ ವಿಭಾಗದ ರಸ್ತೆಗಳನ್ನು ವಿಶೇಷವಾಗಿ ಹಾಗೂ ವಾರ್ಷಿಕವಾಗಿ ದುರಸ್ತಿ ಗೊಳಿಸುವುದಕ್ಕೆಗಿ ಮಂಜೂರು ಮಾಡಿದ ಅನುದಾನದ ಪೈಕಿ ಮೊಟ್ಟ ಮೊದಲು ಟಾರು ಹಾಕುವುದಕ್ಕೆ (ಚಿಪ್ ಕಾರ್ಪೆಟಿಂಗ್) ಹಾಗೂ ಪುನಃ ಟಾರು ಹಾಕುವುದಕ್ಕಾಗಿ (ರೀಚಿಪ್ ಕಾರ್ಪೆಟಿಂಗ್) ಮಾಡಿದ ವೆಚ್ಚದ ವಿವರವನ್ನು ಸಭೆಯಿಂ ಮಂಂದಿಡಲಾಗಿದೆ.

(ಉ) ಕೋಲಾರ ಲೋಕೋಪಯೋಗಿ ಇಲಾಖೆಯ ವಿಭಾಗದಲ್ಲಿ ಐದು ಉಪ-ವಿಭಾಗಗಳಿವೆ ಹಾಗೂ ೫೯೬.೦೦ ಕಿ.ಮೀ. ರಸ್ತೆಗಳಿಗೆ ಟಾರು ಹಾಕಿದೆ.

(ಊ) ರಸ್ತೆಗಳಿಗೆ ಟಾರು ಹಾಕುವುದಕ್ಕಾಗಿ ಪ್ರತ್ಯೇಕವಾದ ಅನುದಾನಗಳನ್ನು ಗೊತ್ತುಪಡಿಸಿಲ್ಲ ಆದರೆ ವಿಶೇಷ ದುರಸ್ತಿಗೊಳಿಸುವುದಕ್ಕಾಗಿ ಒಟ್ಟುಗೂಡಿಸಿದ ಅನುದಾನದ ಮೇರೆಗೆ ರಸ್ತೆಗೆ ಟಾರು ಹಾಕುವುದನ್ನು ಪೂರ್ತಿಗೊಳಿಸಲಾಗಿದೆ ಅದರ ವಿವರಗಳು ಕೆಳಕಂಡಂತಿದೆ. —

ವರ್ಷ		ಗೊತ್ತುಪಡಿಸಿದ ಅನುದಾನ	ವೆಚ್ಚವಾದ ಮೊಬಲಗು ರೂ. ಗಳಲ್ಲಿ
೧೯೬೫-೬೬	...	೧,೯೮,೦೦೦	೧,೫೧,೩೮೨
೧೯೬೬-೬೭	...	೧,೭೫,೦೦೦	೧,೮೫,೮೧೪
೧೯೬೭-೬೮	...	೯೨,೦೦೦	೮೫,೧೬೧
೧೯೬೮-೬೯	...	೩೨,೦೦೦	೧೯,೦೨೨
೧೯೬೯-೭೦	...	...	...
೧೯೭೦-೭೧	...	೫೬,೮೦೦	೩೮,೧೭೫
೧೯೭೧-೭೨	...	೩೫,೮೦೦	೩೫,೯೧೨
೧೯೭೨-೭೩	...	೪೯,೮೦೦	೩೨,೪೬೦
೧೯೭೩-೭೪	...	೫,೮೦೦	೯೩೦
೧೯೭೪-೭೫	...	...	...

ಶ್ರೀ ಚೌಡಾರೆಡ್ಡಿ — ಸ್ವಾಮಿ, ಬ್ಲಾಕ್ ಟಾಪ್ಡ್ ಸರ್‌ಫೇಸಿಗೂ ಮತ್ತು ಆಸ್ಫಾಲ್ಟೆಡ್ ಸರ್‌ಫೇಸ್‌ಗೂ ವ್ಯತ್ಯಾಸ ಏನು ?

† ಶ್ರೀ ಎಚ್. ಎಂ. ಚೆನ್ನಬಸಪ್ಪ — ಬ್ಲ್ಯಾಕ್ ಟಾಪ್ಡ್ ಸರ್‌ಫೇಸಿಗೂ ಮತ್ತು ಆಸ್ಫಾಲ್ಟೆಡ್ ಸರ್‌ಫೇಸ್‌ಗೂ ವ್ಯತ್ಯಾಸ ಇದೆ. ಬ್ಲಾಕ್ ಟಾಪ್ಡ್ ಸರ್‌ಫೇಸ್ ಎಂದರೆ ಬಂಡಿಂಗ್ ಕೆಲಸ, ಜಲ್ಲಿ ಕೆಲಸ ಮರಳು ಹಾಕುವ ಕೆಲಸ ನಾನಾ ತರಹ ಕೆಲಸ ನಾನಾ ತರಹ ಕೆಲಸ ಇದೆ, ಅವುಗಳ ಗುಣಮಟವನ್ನು ನೋಡಿಕೊಂಡು ಕೆಲಸ ಮಾಡುತ್ತಾರೆ.

ಶ್ರೀ ಚೌಡಾರೆಡ್ಡಿ.—ಚಿಕ್ಕಬಳ್ಳಾಪುರ ಡಿವಿಷನ್‌ನಲ್ಲಿ ಮಾಡಿದಂಥಾ ರಸ್ತೆ ಕೆಲಸ ನೋಡಿದರೆ ಬ್ಲಾಕ್ ಟಾಪ್ಡ್ ಸರ್‌ಫೇಸ್ ಮಾಡಿದ್ದೀರಿ ಅದೇ ಕೋಲಾರ ಡಿವಿಷನ್ ತೆಗೆದುಕೊಂಡರೆ ಅಲ್ಲಿ ಮಾಡಿದಂಥಾ ರಸ್ತೆ ಕೆಲಸ ಆಸ್ಫಾಲ್ಟೆಡ್ ಸರ್‌ಫೇಸ್ ತೆಗೆದುಕೊಂಡು ಚೆನ್ನಾಗಿ ಕೆಲಸ ಮಾಡಿದ್ದಾರೆ. ಕೋಲಾರ ಡಿವಿಷನ್ ಮತ್ತು ಬೆಂಗಳೂರು ಡಿವಿಷನ್ ಈ ಎರಡನ್ನು ಬಿಟ್ಟು ಬೇರೆ ಕಡೆ ಮಾಡಿರುವ ಕೆಲಸವನ್ನು ನೋಡಿದರೆ ಬಹಳ ವರ್ಸ್ಟ್ ಸರ್ಫೇಸ್ ಕೆಲಸ ಆಗಿದೆ. ಏಕೆ ಸ್ವಾಮಿ ಈ ವ್ಯತ್ಯಾಸ ?

ಶ್ರೀ ಎಚ್. ಎಂ. ಚನ್ನಬಸಪ್ಪ — ಎಲ್ಲಾ ರಸ್ತೆಗಳನ್ನೂ ಒಂದೇ ರೀತಿಯಾಗಿ ಮಾಡುವುದಕ್ಕಾಗುವುದಿಲ್ಲ. ಎಲ್ಲೆಲ್ಲಿ ಯಾವ ಯಾವ ತರಹದಾದ ಕೆಲಸಕ್ಕೆ ಮಂಜೂರು ಆಗಿರುತ್ತದೋ ಆಯಾಯತರಹ ಕೆಲಸ ಮಾಡುತ್ತಾರೆ

ಶ್ರೀ ಚೌಡಾರೆಡ್ಡಿ.— ಸ್ವಾಮಿ, ಚಿಕ್ಕಬಳ್ಳಾಪುರ ಡಿವಿಷನ್ ರಸ್ತೆಗಳನ್ನು ತೆಗೆದುಕೊಂಡರೆ ಅದು ಬಹಳ ಪರ್ಸ್ಟ್ ರೋಡ್, ಅಲ್ಲಿ ಈ ತರಹ ಕೆಲಸ ಮಾಡುವುದಕ್ಕೆ ಕಾರಣ ಏನು ಸ್ವಾಮಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ತಾವು ಹೇಳಿದಂತೆ ಎಲ್ಲಾ ಕಡೆಯೂ ಒಂದೇ ರೀತಿ ಕೆಲಸ ಮಾಡಬೇಕು ಅಂದರೆ ಆಗುವುದಿಲ್ಲ. ಯಾವ ಯಾವ ರಸ್ತೆಗೆ ಯಾವ ಯಾವ ರೀತಿ ಎಸ್ಟಿಮೇಟ್ ಆಗಿರುತ್ತದೋ ಯಾವ್ಯಾವರೀತಿಯಾಗಿ ಆ ಎಸ್ಟಿಮೇಟ್‌ಗಳೂ ಮಂಜೂರಾಗಿರುತ್ತದೋ ಆಯಾಯ ತರಹವಾಗಿ ಆ ಕೆಲಸಗಳನ್ನು ತೆಗೆದುಕೊಂಡು ಮಾಡುತ್ತಾರೆ.

ಶ್ರೀ ಚೌಡಾರೆಡ್ಡಿ.—ಸರ್ಟೈರ್ ಆಗಿ ಚಿಕ್ಕಬಳ್ಳಾಪುರ ರಸ್ತೆ ತೆಗೆದುಕೊಂಡರೆ ಒಂದು ಕಡೆ ನ್ಯಾಷನಲ್ ಹೈವೇ ಇನ್ನೊಂದು ಸ್ಟೇಟ್ ಹೈವೇ ಇರುತ್ತದೆ. ಆದುದರಿಂದ ಈ ರಸ್ತೆ ಸರಿಯಾದ ರೀತಿಯಲ್ಲಿ ಮಾಡದೇ ಹೋದರೆ ಬಹಳ ತೊಂದರೆಯಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಮಂಜೂರಾತಿಗೆ ಅನುಗುಣವಾಗಿ, ಎಸ್ಟಿಮೇಟ್‌ಗೆ ಅನುಗುಣವಾಗಿ ಸರಿಯಾಗಿ ಕೆಲಸ ನಡೆಯದೇ ಇದ್ದಪಕ್ಷದಲ್ಲಿ ಅದನ್ನು ನನ್ನ ಗಮನಕ್ಕೆ ತಂದರೆ ಅದನ್ನು ಖಂಡಿತವಾಗಿ ವಿಚಾರ ಮಾಡುತ್ತೇನೆ.

Bridges across Agrani Nala and Ajur Nala

672 SRI A. A. DESAI (Athani).— Will the Minister for Public Works be pleased to state :—

(*a*) whether Government are aware that thousands of pilgrims visit Khilegaon Basavanna Temple in Athani Taluk.

(*b*) whether it is a fact that these pilgrims and general public are put to great hardship and inconvenience due to Agrani Nala and Ajur Nala blocking the road for about four to five months every year

(*c*) if so, whether Government proposes to construct causeways over these nalas ?

SRI H.M, CHANNABASAPPA Minister for Public works.—

(*a*) Yes.

(*b*) Yes.

(*c*) Yes.

(i) Bridge across Agrani Nala is included in the Budget for 1976-77.

(ii) Bridge across Ajur Nala will be considered during 1977-78,

ಮಾನ್ಯ ಅಧ್ಯಕ್ಷರೇ, ಇಲ್ಲಿ ಕೊಟ್ಟಿರತಕ್ಕಂಥ ಉತ್ತರದಲ್ಲಿ ಆಗ್ರಾಣಿ ನಾಲೆಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಕಾಮಗಾರಿಯನ್ನು ೧೯೭೬-೭೭ನೇ ಸಾಲಿನ ಆಯವ್ಯಯ ಮುಂಗಡ ಪತ್ರದಲ್ಲಿ ಸೇರಿಸಲಾಗಿದೆ ಎಂದು ಹೇಳಲಾಗಿದೆ ಇದರಲ್ಲಿ ಆಗ್ರಾಣೀನಾಲೆ ಬಾಬುಬಿಷ್ಟೆ ಬದಲು ತಿಪ್ಪಾಪುರ ನಾಲೆ ಎಂದು ಸರಿ ಮಾಡಿಕೊಂಡು ಮುಂದಿನ ಪ್ರಶ್ನೆಗಳನ್ನು ಮಾನ್ಯ ಸದಸ್ಯರು ಕೇಳಬಹುದು.